B.com 6th Sem

5382—F81—VI SC—May 2014

SIXTH SEMESTER B.Com. DEGREE EXAMINATION, 2014

# COST ACCOUNTING—II

Time : Three Hours

Maximum : 80 Marks

*Answer* **all** *sections according to internal choice.*
*Give working notes wherever necessary.*
*Non-programmable calculator is permitted.*

## Section A

1. Answer any *ten* of the following :—

   (a) Why profit reconciliation statement is prepared ?

   (b) In which industries job costing is applied ?

   (c) State the method of valuation of stock in Cost accounts and Financial accounts.

   (d) What is service costing ? Where it is applied ?

   (e) How the abnormal loss and abnormal gain are treated ?

   (f) What is sub-contract ? How it is treated in Contract Account ?

   (g) Define composite cost unit. Give *two* examples.

   (h) Give the formula for calculation of WIP in contract costing.

   (i) What is break-even point ? How it is calculated ?

   (j) What is separation point ?

   (k) Define Marginal Costing.

   (l) Calculate P/V ratio and BEP - Fixed costs Rs. 1,80,000, Sales Rs. 6,00,000, and Profit Rs. 1,20,000.

(10 × 2 = 20 marks)

## Section B

*Answer any* **three** *of the following.*

2. The estimated material cost of Job No. 101 is Rs. 10,000 and direct labour cost to be Rs. 2,000. In machine shop the job required machining by Machine No.12 for 20 hours and Machine No. 20 for 6 hours. Machine hour rates for Machine No.12 and Machine No. 20 are Rs. 20 and Rs. 30 respectively. Machine shop cost only is considered. The direct wages of all jobs last year amounted to Rs. 1,60,000 as against Rs. 96,000 factory overhead. Last year's factory cost of all jobs amounted to Rs. 5,00,000 as against Rs. 75,000 office expenses.

   Prepare a quotation which guaranteed 20 % profit on selling price.

Turn over

3. From the following particulars, prepare reconciliation statement and ascertain costing profit or loss. Net profit as per financial profit and loss account is Rs. 50,000. Opening stock was overvalued in cost accounts as compared to financial accounts Rs. 2,000.

   Administration overheads charged on financial books is Rs. 20,000 but recovered on costing books Rs. 40,000.

   Income-tax provision Rs. 1,200.

   Notional salary of proprietor in cost accounts Rs. 20,000

   Interest received Rs. 12,000.

   Closing stock as per financial books Rs. 16,200

   Whereas in costing books it was Rs. 19,000.

4. From the following data, calculate :

   (a) P/V ratio.

   (b) Profit when sales are Rs. 40,000.

   (c) New break-even point is selling price is reduced by 20 %.

| | | |
|---|---|---|
| Fixed expenses | ... | Rs. 8,000 |
| Break-even point | ... | Rs. 20,000 |

5. From the following information find out the cost of product P and Q. The latter being the by-product on whose sale a profit of 20 % on selling price is obtained :

| *Particulars* | | *Joint Expenditure* | *Separate Expenditure* | |
|---|---|---|---|---|
| | | | P | Q |
| | | Rs. | Rs. | Rs. |
| Material | ... | 18,000 | 4,000 | 2,000 |
| Labour | ... | 8,000 | 1,600 | 600 |
| Expenses | ... | 4,000 | 2,000 | 800 |

   Total amount realised on sale of product Q was Rs. 7,000.

6. A transport contractor arranges for carrying iron ore from iron ore mine to factory. The following vehicles are maintained :

| *No. of vehicles* | | *Capacity of vehicles* |
|---|---|---|
| 40 | ... | 5 ton lorries |
| 60 | ... | 4 ton lorries |
| 100 | ... | 3 ton lorries |
| 80 | ... | 2 ton lorries |

On an average each lorry makes six trips per day and in each trip lorries cover a distance of 5 kilometres. Each lorry carries iron ore weighing only 60 % of its capacity. Taking an annual average 20 % of the lorries are laid for repairs everyday. Calculate tonne-kilometers from the above information. There are 365 working days during the year.

7. What is break-even chart ? What are its advantages and disadvantages ?

(3 × 5 = 15 marks)

## Section C

*Answer any* **three** *questions.*
**Question 13** *is* **compulsory**.

8. Product C is obtained after it passes through three distinct processes. You are required to prepare Process Accounts, Abnormal loss account and Abnormal gain account from the following information :

| *Particulars* | *Total* | *Process* I | II | III |
|---|---|---|---|---|
| | Rs. | Rs. | Rs. | Rs. |
| Material ... | 7,542 | 2,600 | 1,980 | 2,962 |
| Direct Wages ... | 9,000 | 2,000 | 3,000 | 4,000 |
| Production overheads ... | 9,000 | | | |

500 untis at Rs. 6 per unit were introduced in Process I. Production overheads are to be distributed at 100 % on direct wages.

| *Process* | *Actual output units* | *Normal loss* | *Value of scrap per unit* Rs. |
|---|---|---|---|
| Process I ... | 475 | 5 % | 4 |
| Process II ... | 420 | 10 % | 8 |
| Process III ... | 375 | 15 % | 10 |

9. Popular building contractors undertook a contract for Rs. 30,00,000 on 1-4-2013. The Trial Balance as on 31-3-2014 is as under :

*Trial Balance as on 31-3-2014*

| *Particulars* | | *Debit* Rs. | *Credit* Rs. |
|---|---|---|---|
| Share Capital | ... | — | 6,00,000 |
| Cash received from contractee (75 % of work certified) | ... | — | 15,00,000 |
| Charged to contract : | | | |
| Materials | ... | 13,00,000 | — |
| Plant | ... | 3,00,000 | — |
| Wages | ... | 1,02,000 | — |
| Supervisor salary | ... | 66,000 | — |
| Administrative expenses | ... | 3,00,000 | — |
| Other expenses | ... | 32,000 | — |
| | | 21,00,000 | 21,00,000 |

Additional Information :

(a) Wages for a week and salary of supervisor for a month are outstanding.

(b) Plant costing Rs. 40,000 was returned on 31-3-2014.

(c) The material costing Rs. 20,000 were returned to stores.

(d) The plant costing Rs. 24,000 was lost in accident and the insurance company paid Rs. 20,000 only.

(e) Material on site as on 31-3-2014 was Rs. 30,000.

(f) Provide depreciation on plant at 10 % p.a.

(g) Work uncertified was Rs. 1,00,000.

Prepare Contract Account and Balance Sheet as on 31-3-2014.

10. Mr. Rakesh owns a bus which runs according to the following schedule :

(i) Dharward to Kolhapur and back on the same day. Distance covered 150 kms. one way, the bus runs 8 days in a month and seating capacity occupied is 90 %.

(ii) Dharward to Sirsi and back on the same day. Distance covered 120 kms. one way, the bus runs 10 days in a month and seating capacity occupied is 85 %.

(iii) Dharwad to Raichur and back the same day. Distance covered 270 kms. one way, the bus runs 6 days in a month and seating capacity occupied is 100 %.

Following are the other details :

| | | |
|---|---|---|
| Cost of the bus | ... | Rs. 6,00,000 |
| Salary of the driver | ... | Rs. 2,800 p.m. |
| Salary of the conductor | ... | Rs. 2,200 p.m. |
| Salary of part-time accountant | ... | Rs. 200 p.m. |
| Insurance of the bus | ... | Rs. 4,800 p.a. |
| Diesel consumption 4 kms. per litre at Rs. 6 per litre. | | |
| Road tax | ... | Rs. 1,500 p.a. |
| Lubricant oil | ... | Rs. 10 per 100 kms. |
| Permit fee | ... | Rs. 315 p.m. |
| Repairs and maintenance | ... | Rs. 1,000 p.m. |
| Depreciation of the bus | ... | at 20 % p.a. |
| Seating capacity of the bus | ... | 50 persons |

Passenger tax is 20 % of the total takings. Calculate the bus fare to be charged from each passenger to earn a profit of 30 % on total takings and the fares to be charged for per passenger for the journeys :

(i) Dharwad to Kolhapur.

(ii) Dharwad to Sirsi.

(iii) Dharwad to Raichur.

Turn over

11. The Modern Ltd. is producing two types of face power "Talc" and "Compact". The manufacturing costs for the year ended 31st March 2014 were as follows :

| | | Rs. |
|---|---|---|
| Direct Materials | ... | 3,20,000 |
| Direct Wages | ... | 4,40,000 |
| Production overhead | ... | 1,20,000 |
| Total | ... | 8,80,000 |

It is ascertained that :

(a) Direct materials in "Talc" type of powder cost twice as much as that of "Compact" type.

(b) Direct wages of "Compact" type powder were 60 % of those for "Talc" type.

(c) Production overhead was 80 paise per powder for both types.

(d) Administration overhead for each type was 150 % of direct wages.

(e) Selling cost was 50 paise per powder for both the types.

(f) Production during the year was :

"Talc" type — 50,000 boxes of which 45,000 were sold

"Compact" type — 1,00,000 boxes of which 90,000 were sold.

(g) Selling prices were Rs. 20 per box of "Talc" type and Rs. 14 per box of "Compact" type.

Prepare a statement showing the total cost per box of powder of each type and the profit made on each type.

12. From the following figures, prepare Ronciliation statement :

| | | Rs. |
|---|---|---|
| Net loss as per costing records | ... | 1,72,400 |
| Works overhead under recovered in cost accounts | ... | 3,120 |
| Administration overhead over-recovered in cost accounts | ... | 1,700 |
| Depreciation charged in financial accounts | ... | 11,200 |

| | | Rs. |
|---|---|---|
| Depreciation charged in cost accounts | ... | 12,500 |
| Interest received not included in cost accounts | ... | 8,000 |
| Obsolescence charged on financial accounts | ... | 5,700 |
| Income-tax provided in financial accounts | ... | 40,300 |
| Bank interest credited in financial accounts | ... | 750 |
| Stores adjustment (Cr.) in financial accounts | ... | 475 |
| Value of opening stock in cost accounts | ... | 52,600 |
| Value of opening stock in financial accounts | ... | 54,000 |
| Value of closing stock in cost accounts | ... | 52,000 |
| Value of closing stock in financial accounts | ... | 49,600 |
| Interest charged in cost account but not in financial account | ... | 6,000 |
| Provision for doubtful debts in financial accounts | ... | 150 |
| Preliminary expenses written-off in financial books | ... | 800 |

13. Adarsh Company Ltd. manufactures three different products and the following information is provided :

| *Particulars* | | *Product* A | B | C |
|---|---|---|---|---|
| Sales mix | ... | 35 % | 35 % | 30 % |
| Selling price per unit | ... | Rs. 30 | Rs. 40 | Rs. 20 |
| Variable cost per unit | ... | Rs. 15 | Rs. 20 | Rs. 12 |
| Total fixed cost | ... | Rs. 1,80,000 | | |
| Total sales | ... | Rs. 6,00,000 | | |

The company has a proposal to discontinue the product "C" and replace it with "P" and the following results are anticipated :

| *Particulars* | | *Product* A | B | C |
|---|---|---|---|---|
| Sales mix | ... | 50 % | 25 % | 25 % |
| Selling price per unit | ... | Rs. 30 | Rs. 40 | Rs. 30 |
| Variable cost per unit | ... | Rs. 15 | Rs. 20 | Rs. 15 |
| Total fixed cost | ... | Rs. 1,80,000 | | |
| Total sales | ... | Rs. 6,40,000 | | |

Calculate the present profitability position and profitability if product C is replaced by product P. Will you advise the company to change over to product P with reasons.

(3 × 15 = 45 marks)

## Kannada Version

*ಆಂತರಿಕ ಆಯ್ಕೆಗೆ ಅನುಗುಣವಾಗಿ* ***ಎಲ್ಲಾ*** *ವಿಭಾಗಗಳಿಗೂ ಉತ್ತರಿಸಿರಿ.*
*ಅವಶ್ಯವಿದ್ದಲ್ಲಿ ಟಿಪ್ಪಣಿ ಕೊಡಿರಿ.*
*ಸಾದಾ ಕ್ಯಾಲ್ಕುಲೇಟರನ್ನು ಉಪಯೋಗಿಸಲು ಅನುಮತಿಸಲಾಗಿದೆ.*

### ವಿಭಾಗ ಅ

1. ಬೇಕಾದ **ಹತ್ತಕ್ಕೆ** ಉತ್ತರಿಸಿರಿ :

(a) ಲಾಭ ಸಮನ್ವಯ ಪತ್ರಿಕೆಯನ್ನು ಏಕೆ ತಯಾರಿಸುತ್ತಾರೆ?

(b) ಯಾವ ಉದ್ದಿಮೆಗಳಲ್ಲಿ ಬಿಡಿ ಗುತ್ತಿಗೆ ವೆಚ್ಚ ನಿರ್ಣಯಪದ್ಧತಿ ಅನ್ವಯಿಸುತ್ತಾರೆ?

(c) ವೆಚ್ಚಶಾಸ್ತ್ರ ಮತ್ತು ಹಣಕಾಸು ಶಾಸ್ತ್ರದಲ್ಲಿ ಶಿಲ್ಕಿನ ಮೌಲ್ಯವನ್ನು ನಿರ್ಧರಿಸುವ ಪದ್ಧತಿಯನ್ನು ತಿಳಿಸಿರಿ.

(d) ಸೇವಾವೆಚ್ಚ ನಿರ್ಣಯ ಪದ್ಧತಿಯೆಂದರೇನು? ಅದನ್ನು ಯಾವ ಉದ್ದಿಮೆಗಳಲ್ಲಿ ಅಳವಡಿಸಬಹುದು?

(e) ಅಸಾಮಾನ್ಯ ಹಾನಿ ಹಾಗೂ ಅಸಾಮಾನ್ಯ ಲಾಭವನ್ನು ಹೇಗೆ ಪರಿಗಣಿಸುತ್ತಾರೆ?

(f) ಉಪಗುತ್ತಿಗೆಯೆಂದರೇನು? ಅದನ್ನು ಗುತ್ತಿಗೆ ಖಾತೆಯಲ್ಲಿ ಹೇಗೆ ಪರಿಗಣಿಸುತ್ತಾರೆ?

(g) ಸಂಯುಕ್ತ ವೆಚ್ಚಮಾನವನ್ನು ವ್ಯಾಖ್ಯಾನಿಸಿ, ಎರಡು ಉದಾಹರಣೆಗಳನ್ನು ಕೊಡಿರಿ.

(h) ಗುತ್ತಿಗೆ ವೆಚ್ಚಶಾಸ್ತ್ರದಲ್ಲಿ ಅಪೂರ್ಣವಾದ ಕೆಲಸದ ಮೌಲ್ಯವನ್ನು ಕಂಡುಹಿಡುಯುವ ಮಾನದಂಡವನ್ನು ಕೊಡಿ.

(i) ಸಮಪಾತಳಿ ಬಿಂದು ಎಂದರೇನು? ಅದನ್ನು ಹೇಗೆ ಕಂಡುಹಿಡಿಯುವಿರಿ?

(j) ಬೇರ್ಪಡುವ ಬಿಂದು ಎಂದರೇನು?

(k) ಅಂಚುವೆಚ್ಚ ನಿರ್ಣಯ ಪದ್ಧತಿಯ ವ್ಯಾಖ್ಯೆಯನ್ನು ಕೊಡಿರಿ.

(l) ಲಾಭ–ಗಾತ್ರ ಅನುಪಾತ ಮತ್ತು ಸಮಪಾತಳಿ ಬಿಂದು ಕಂಡುಹಿಡಿಯಿರಿ :

ಸ್ಥಿರ ವೆಚ್ಚ ರೂ. 1,80,000, ಮಾರಾಟ ರೂ. 6,00,000, ಲಾಭ ರೂ. 1,20,000.

(10 × 2 = 20 marks)

### ವಿಭಾಗ ಬ

*ಕೆಳಗಿನವುಗಳಲ್ಲಿ ಬೇಕಾದ* ***ಮೂರಕ್ಕೆ*** *ಉತ್ತರಿಸಿರಿ.*

2. ಬಿಡಿ ಕೆಲಸ ಸಂಖ್ಯೆ 101ರ ಅಂದಾಜು ನೇರ ಸರಕುಗಳ ವೆಚ್ಚ ರೂ. 10,000 ಮತ್ತು ನೇರ ಕೂಲಿ ವೆಚ್ಚ ರೂ. 2,000 ಇರುತ್ತದೆ. ಈ ಬಿಡಿ ಕೆಲಸವನ್ನು ಪೂರೈಸಲು ಯಂತ್ರಗಳ ವಿಭಾಗದಲ್ಲಿ ಯಂತ್ರ ನಂ. 12 ರಲ್ಲಿ 20 ತಾಸುಗಳು ಮತ್ತು ಯಂತ್ರ ನಂ. 20 ರಲ್ಲಿ 6 ತಾಸುಗಳ ಕೆಲಸ ಮಾಡಬೇಕಾಗುತ್ತದೆ. ಈ ಯಂತ್ರಗಳ ಮೇಲೆ ಕೆಲಸ ಮಾಡಲು ಯಂತ್ರಗಳ ಖರ್ಚು ಪ್ರತಿ ತಾಸಿಗೆ ಯಂತ್ರ ನೆ. 12 ರೂ. 20 ಮತ್ತು ಯಂತ್ರ ನಂ. 20 ರೂ. 30 ಇರುತ್ತದೆ. ಯಂತ್ರಗಳ ವಿಭಾಗದ ಖರ್ಚನ್ನು ಮಾತ್ರ ಪರಿಗಣಿಸಲಾಗಿದೆ. ಕಳೆದ ವರ್ಷ ಎಲ್ಲಾ ಬಿಡಿ ಕೆಲಸಗಳ ನೇರ ಕೂಲಿ ವೆಚ್ಚ ರೂ. 1,60,000 ಮತ್ತು ಉತ್ಪಾದನಾ ಪರೋಕ್ಷ ವೆಚ್ಚ ರೂ. 96,000 ಇರುತ್ತದೆ. ಕಳೆದ ವರ್ಷ ಎಲ್ಲಾ ಬಿಡಿ ಕೆಲಸಗಳ ಉತ್ಪಾದನಾ ವೆಚ್ಚ ರೂ. 5,00,000 ಮತ್ತು ಆಡಳಿತಾತ್ಮಕ ವೆಚ್ಚ ರೂ. 75,000 ಇದ್ದಿತು.

ಮಾರಾಟ ಬೆಲೆಯ ಮೇಲೆ ಶೇಕಡಾ 20 ರಷ್ಟು ಲಾಭ ಇರುವಂತೆ ಬೆಲೆಯನ್ನು ನಿರ್ಧರಿಸಿರಿ.

Turn over

3. ಕೆಳಗಿನ ಮಾಹಿತಿಯನ್ನಾಧರಿಸಿ ಸಮನ್ವಯ ಪಟ್ಟಿಯನ್ನು ತಯಾರಿಸಿ ವೆಚ್ಚಶಾಸ್ತ್ರದ ಪ್ರಕಾರ ಲಾಭ–ಹಾನಿಯನ್ನು ಕಂಡುಹಿಡಿಯಿರಿ.

ಲೆಕ್ಕಶಾಸ್ತ್ರದ ಪ್ರಕಾರ ನಿವ್ವಳ ಲಾಭ ರೂ. 50,000 ಇರುತ್ತದೆ. ಆರಂಭಿಕ ಸರಕುಗಳ ಶಿಲ್ಕು ವೆಚ್ಚಶಾಸ್ತ್ರದಲ್ಲಿ ರೂ. 2,000 ಹೆಚ್ಚಿಗೆ ಆಕರಣೆ ಆಗಿರುತ್ತದೆ.

ಆಡಳಿತಾತ್ಮಕ ವೆಚ್ಚಲೆಕ್ಕಶಾಸ್ತ್ರದಲ್ಲಿ ರೂ. 20,000 ಆಕರಣೆಯಾಗಿರುತ್ತದೆ. ಆದರೆ ವೆಚ್ಚಶಾಸ್ತ್ರದಲ್ಲಿ ರೂ. 40,000 ಆಕರಿಸಲಾಗಿದೆ.

ಆದಾಯಕರಕ್ಕೆ ಒದಗಿಸಿದ್ದು ರೂ. 1,200.

ವೆಚ್ಚಶಾಸ್ತ್ರದಲ್ಲಿ ಮಾಲಿಕನ ಕಾಲ್ಪನಿಕ ಸಂಬಳ ರೂ. 20,000.

ಬಡ್ಡಿ ಸ್ವೀಕರಿಸಿದ್ದು ರೂ. 12,000.

ಲೆಕ್ಕಶಾಸ್ತ್ರದ ಪ್ರಕಾರ ಅಖೈರು ಸರಕುಗಳ ಶಿಲ್ಕು ರೂ. 16,200. ಆದರೆ ವೆಚ್ಚಶಾಸ್ತ್ರದ ಪ್ರಕಾರ ರೂ. 19,000 ಇರುತ್ತದೆ.

4. ಒದಗಿಸಿದ ಮಾಹಿತಿಯ ಪ್ರಕಾರ, ಈ ಕೆಳಗಿನವುಗಳನ್ನು ಕಂಡುಹಿಡಿಯಿರಿ :

(a) ಲಾಭ–ಗಾತ್ರ ಪ್ರಮಾಣ.

(b) ರೂ. 40,000 ಮಾರಾಟವಾದಾಗ ಬರುವ ಲಾಭ.

(c) ಮಾರಾಟ ಬೆಲೆಯನ್ನು ಶೇ. 20ರಷ್ಟು ಕಡಿಮೆ ಮಾಡಿದರೆ ಹೊಸ ಸಮಪಾತಳಿ ಮಾರಾಟ ಮೌಲ್ಯ

| | | |
|---|---|---|
| ಸ್ಥಿರ ವೆಚ್ಚಗಳು | ... | ರೂ. 8,000 |
| ಸಮಪಾತಳಿ | ... | ರೂ. 20,000 |

5. ಈ ಕೆಳಗಿನ ಮಾಹಿತಿಯಿಂದ 'ಪಿ' ಮತ್ತು 'ಕ್ಯೂ' ವಸ್ತುಗಳ ಉತ್ಪಾದನಾ ವೆಚ್ಚವನ್ನು ಕಂಡುಹಿಡಿಯಿರಿ. 'ಕ್ಯೂ' 'ಪಿ' ವಸ್ತುವಿನ ಉಪವಸ್ತುವಾಗಿದ್ದು ಅದರ ಮಾರಾಟದ ಬೆಲೆ ಮೇಲೆ ಶೇ. 20ರಷ್ಟು ಲಾಭದೊಂದಿಗೆ ಮಾರಾಟವಾಗುತ್ತದೆ.

| ವಿವರಗಳು | | ಜಂಟಿ ವೆಚ್ಚಗಳು | ಪ್ರತ್ಯೇಕ ವೆಚ್ಚಗಳು | |
|---|---|---|---|---|
| | | | ಪಿ. | ಕ್ಯೂ. |
| | | ರೂ. | ರೂ. | ರೂ. |
| ಕಚ್ಚಾ ಸರಕುಗಳು | ... | 18,000 | 4,000 | 2,000 |
| ಕೂಲಿ | ... | 8,000 | 1,600 | 600 |
| ಖರ್ಚುಗಳು | ... | 4,000 | 2,000 | 800 |

'ಕ್ಯೂ' ವಸ್ತುವನ್ನು ಮಾರಾಟ ಮಾಡಿ ಬಂದ ಹಣ ರೂ. 7,000.

6. ಒಬ್ಬ ಸಾರಿಗೆ ಗುತ್ತಿಗೆದಾರ ಕಬ್ಬಿಣ ಅದಿರನ್ನು ಕಬ್ಬಿಣದ ಗಣಿಯಿಂದ ಕಾರ್ಖಾನೆಗೆ ಸಾಗಿಸುವ ಒಪ್ಪಂದವನ್ನು ಮಾಡಿಕೊಂಡಿದ್ದನು. ಅವನು ಈ ಕೆಳಗಿನಂತೆ ವಾಹನಗಳನ್ನು ವ್ಯವಸ್ಥೆ ಮಾಡಿದ್ದನು :

| ವಾಹನಗಳ ಸಂಖ್ಯೆ | | ವಾಹನಗಳ ಸಾಮರ್ಥ್ಯ |
|---|---|---|
| 40 | ... | 5 ಟನ್ ಟ್ರಕ್‌ಗಳು |
| 60 | ... | 4 ಟನ್ ಟ್ರಕ್‌ಗಳು |
| 100 | ... | 3 ಟನ್ ಟ್ರಕ್‌ಗಳು |
| 80 | ... | 2 ಟನ್ ಟ್ರಕ್‌ಗಳು |

ಸರಾಸರಿಯಾಗಿ ಪ್ರತಿಯೊಂದು ಟ್ರಕ್ ಪ್ರತಿ ದಿವಸ ಆರು ಟ್ರಿಪ್‌ಗಳನ್ನು ಮಾಡುತ್ತದೆ ಮತ್ತು ಪ್ರತಿ ಟ್ರಿಪ್‌ಗೆ 5 ಕಿ.ಮೀ. ಅಂತರವನ್ನು ಕ್ರಮಿಸುತ್ತದೆ. ಪ್ರತಿಯೊಂದು ಟ್ರಕ್ ತನ್ನ ಸಾಮರ್ಥ್ಯದ ಶೇ. 60ರಷ್ಟು ಕಬ್ಬಿಣದ ಅದಿರನ್ನು ಒಯ್ಯುತ್ತದೆ. ವಾರ್ಷಿಕ ಸರಾಸರಿಯಂತೆ ಶೇ. 20 ರಷ್ಟು ಟ್ರಕ್‌ಗಳನ್ನು ಪ್ರತಿ ದಿವಸ ರಿಪೇರಿಗೆ ಬಿಡಲಾಗುತ್ತದೆ. ವರ್ಷದಲ್ಲಿಯ ಎಲ್ಲ 365 ದಿನಗಳನ್ನು ಕೆಲಸದ ದಿನಗಳೆಂದು ಪರಿಗಣಿಸಲಾಗಿದೆ.

ಮೇಲ್ಕಾಣಿಸಿದ ಮಾಹಿತಿಯಿಂದ ಟನ್ ಕಿ.ಮೀ.ಗಳನ್ನು ಕಂಡುಹಿಡಿಯಿರಿ.

7. ಲಾಭಹಾನಿಯ ಶೂನ್ಯ ಸ್ಥಿತಿ ನಕಾಶೆ ಎಂದರೇನು? ಅದರ ಅನುಕೂಲತೆಗಳು ಮತ್ತು ಅನಾನುಕೂಲತೆಗಳು ಯಾವುವು?

(3 × 5 = 15 marks)

## ವಿಭಾಗ ಕ

*ಬೇಕಾದ* **ಮೂರು** *ಪ್ರಶ್ನೆಗಳಿಗೆ ಉತ್ತರಿಸಿ.*

**ಪ್ರಶ್ನೆ 13 ಕಡ್ಡಾಯವಾಗಿದೆ.**

8. ಒಂದು ಸಂಸ್ಥೆಯು ಮೂರು ಕಾರ್ಯ ವಿಧಾನದಲ್ಲಿ ಹಾಯ್ದು 'ಸಿ' ಎಂಬ ವಸ್ತುವನ್ನು ಪಡೆಯುತ್ತಿದೆ. ಈ ಕೆಳಗಿನ ಮಾಹಿತಿಯಿಂದ ಕಾರ್ಯವಿಧಾನ ಖಾತೆಗಳು, ಅಸಾಮಾನ್ಯ ನಷ್ಟ ಖಾತೆ ಮತ್ತು ಅಸಾಮಾನ್ಯ ಪ್ರಾಪ್ತಿ ಖಾತೆಗಳನ್ನು ತಯಾರಿಸಿರಿ :

| ವಿವರಗಳು | | ಒಟ್ಟು ಮೊತ್ತ | ಕಾರ್ಯವಿಧಾನಗಳು | | |
|---|---|---|---|---|---|
| | | | I | II | III |
| | | ರೂ. | ರೂ. | ರೂ. | ರೂ. |
| ನೇರ ಸರಕು | ... | 7,542 | 2,600 | 1,980 | 2,962 |
| ನೇರ ಕೂಲಿ | ... | 9,000 | 2,000 | 3,000 | 4,000 |
| ಉತ್ಪಾದನಾ ಮೇಲು ವೆಚ್ಚ | ... | 9,000 | – | – | – |

ಕಾರ್ಯವಿಧಾನ–I ರಲ್ಲಿ ಪ್ರತಿಯೂನಿಟ್ಟಿಗೆ ರೂ. 6 ರಂತೆ 500 ಯುನಿಟ್ಟುಗಳನ್ನು ಹೂಡಲಾಗಿದೆ. ಉತ್ಪಾದನಾ ಮೇಲುವೆಚ್ಚವನ್ನು ನೇರಕೂಲಿಯ ಶೇ. 100 ರಂತೆ ಹಂಚಲಾಗಿದೆ.

| ಕಾರ್ಯವಿಧಾನ | | ಉತ್ಪಾದನೆ (ಯುನಿಟ್ಟುಗಳು) | ಸಾಮಾನ್ಯ ನಷ್ಟ | ಗುಜರಿ ಬೆಲೆ (ಪ್ರತಿ ಯುನಿಟ್ಟಿಗೆ) |
|---|---|---|---|---|
| | | | | ರೂ. |
| I | ... | 475 | 5% | 4 |
| II | .... | 420 | 10% | 8 |
| III | ... | 375 | 15% | 10 |

9. ಪೊಪ್ಯುಲರ್ ಕಟ್ಟಡ ನಿರ್ಮಾಪಕರು ಒಂದು ಕಾಮಗಾರಿಯನ್ನು 1–4–2013ರಂದು ರೂ. 30,00,000 ಕ್ಕೆ ಪಡೆದುಕೊಂಡಿರುತ್ತಾರೆ. ದಿ. 31–3–2014ಕ್ಕೆ ಕೊನೆಗೊಳ್ಳುವಂತೆ ತಾಳೆಪಟ್ಟಿಯು ಈ ಕೆಳಗಿನಂತಿರುತ್ತದೆ :

ತಾಳೆಪಟ್ಟಿ 31–3–2014ಕ್ಕೆ

| ವಿವರಗಳು | | ಖರ್ಚು ರೂ. | ಜಮಾ ರೂ. |
|---|---|---|---|
| ಶೇರು ಬಂಡವಾಳ : | ... | – | 6,00,000 |
| ಮಾಲಿಕರಿಂದ ನಗದು ಪಡೆದಿದ್ದು (ಶೇ. 75 ಶಿಫಾರಿಸಲ್ಪಟ್ಟ ಕೆಲಸದ ಮೇಲೆ) | ... | – | 15,00,000 |
| ಗುತ್ತಿಗೆಗೆ ಹಾಕಿದ ಖರ್ಚು : | | | |
| ಸರಕುಗಳು | ... | 13,00,000 | – |
| ಸ್ಥಾವರ | ... | 3,00,000 | – |
| ಕೂಲಿ | ... | 1,02,000 | – |
| ಮೇಲ್ವಿಚಾರಕರ ಸಂಬಳ | ... | 66,000 | – |
| ಆಡಳಿತಾತ್ಮಕ ವೆಚ್ಚಗಳು | ... | 3,00,000 | – |
| ಇತರೆ ವೆಚ್ಚಗಳು | ... | 32,000 | – |
| ಒಟ್ಟು | | 21,00,000 | 21,00,000 |

ಹೆಚ್ಚಿನ ಮಾಹಿತಿ :

(a) ಒಂದು ವಾರದ ಕೂಲಿ ಮತ್ತು ಒಂದು ತಿಂಗಳ ಮೇಲ್ವಿಚಾರಕರ ಸಂಬಳ ಬಾಕಿ ಉಳಿದಿರುತ್ತದೆ.

(b) ರೂ. 40,000 ಬೆಲೆಯ ಸ್ಥಾವರವನ್ನು 31–3–2014ಕ್ಕೆ ಹಿಂದಿರುಗಿಸಲಾಗಿದೆ.

(c) ರೂ. 20,000 ಮೌಲ್ಯದ ಸರಕುಗಳನ್ನು ಗುದಾಮಿಗೆ ಹಿಂದಿರುಗಿಸಲಾಗಿದೆ.

(d) ರೂ. 24,000ದ ಸ್ಥಾವರವು ಅಪಘಾತಕ್ಕೀಡಾಗಿದ್ದು ವಿಮೆ ಕಂಪನಿಯಿಂದ ಕೇವಲ ರೂ. 20,000 ದೊರೆತಿದೆ.

(e) ರೂ. 30,000 ಮೌಲ್ಯದ ಸರಕುಗಳು ಕೆಲಸದ ಸ್ಥಳದಲ್ಲಿ 31–3–2014ಕ್ಕೆ ಶಿಲ್ಕು ಇರುತ್ತದೆ.

(f) ಸ್ಥಾವರದ ಮೇಲೆ ವರ್ಷಕ್ಕೆ ಶೇ. 10ರಂತೆ ಸವಕಳಿ ಆಕರಿಸುವ ಪದ್ಧತಿ ಅನ್ವಯಿಸುತ್ತಾರೆ.

(g) ಶಿಫಾರಿಸಲ್ಪಡದ ಕೆಲಸದ ಮೊತ್ತವು ರೂ. 1,00,000 ಆಗಿರುತ್ತದೆ.

31–3–2014 ಕ್ಕೆ ಗುತ್ತಿಗೆ ಖಾತೆ ಮತ್ತು ಅಢಾವೆ ಪತ್ರಿಕೆಯನ್ನು ಸಿದ್ಧಪಡಿಸಿರಿ.

10. ರಾಕೇಶನು ಒಂದು ಬಸ್ಸಿನ ಮಾಲಿಕನಾಗಿದ್ದು ಅದನ್ನು ಈ ಕೆಳಗಿನಂತೆ ಪ್ರಯಾಣಿಕರ ಸಲುವಾಗಿ ಓಡಿಸುತ್ತಾನೆ :

(a) ಬಸ್ಸು ಪ್ರತಿ ತಿಂಗಳಲ್ಲಿ 8 ದಿನ ಧಾರವಾಡ ಹಾಗೂ ಕೊಲ್ಲಾಪುರ ಮಧ್ಯೆ ಹೋಗಿ ಬರುತ್ತಾ ಇರುತ್ತದೆ. ಧಾರವಾಡ ಮತ್ತು ಕೊಲ್ಲಾಪುರದ ಮಧ್ಯೆ ಇರುವ ಅಂತರ 150 ಕಿ.ಮೀ. ಬಸ್ಸು ಧಾರವಾಡ ಹಾಗೂ ಕೊಲ್ಲಾಪುರದ ಪ್ರಯಾಣವನ್ನು ಒಂದೇ ದಿನದಲ್ಲಿ ಮುಗಿಸುತ್ತದೆ. ಬಸ್ಸು ತನ್ನ ಸಾಮರ್ಥ್ಯದ ಶೇ. 90 ರಷ್ಟು ಪ್ರಯಾಣಿಕರಿಂದ ತುಂಬಿರುತ್ತದೆ.

(b) ಪ್ರತಿ ತಿಂಗಳಿನಲ್ಲಿಯ ಮುಂದಿನ 10 ದಿನ ಬಸ್ಸು ಧಾರವಾಡ ಹಾಗೂ ಶಿರ್ಶಿಯ ಮಧ್ಯೆ ಹೋಗಿ ಬರುತ್ತಾ ಇರುತ್ತದೆ. ಧಾರವಾಡ ಮತ್ತು ಶಿರ್ಶಿಯ ಮಧ್ಯೆ ಇರುವ ಅಂತರ 120 ಕಿ.ಮೀ. ಬಸ್ಸು ಧಾರವಾಡ ಹಾಗೂ ಶಿರ್ಶಿಯ ಪ್ರಯಾಣವನ್ನು ಒಂದೇ ದಿನದಲ್ಲಿ ಮುಗಿಸುತ್ತದೆ. ಬಸ್ಸು ತನ್ನ ಸಾಮರ್ಥ್ಯದ ಶೇ. 85ರಷ್ಟು ಪ್ರಯಾಣಿಕರಿಂದ ತುಂಬಿರುತ್ತದೆ.

(c) ಪ್ರತಿ ತಿಂಗಳಿನಲ್ಲಿ ಉಳಿದ 6 ದಿನ ಧಾರವಾಡ ಹಾಗೂ ರಾಯಚೂರು ಮಧ್ಯೆ ಹೋಗಿ ಬರುತ್ತಾ ಇರುತ್ತದೆ. ಧಾರವಾಡ ಹಾಗೂ ರಾಯಚೂರು ಮಧ್ಯೆ ಇರುವ ಅಂತರ 270 ಕಿ.ಮೀ. ಬಸ್ಸು ಧಾರವಾಡ ಹಾಗೂ ರಾಯಚೂರು ಪ್ರಯಾಣವನ್ನು ಒಂದೇ ದಿನದಲ್ಲಿ ಮುಗಿಸುತ್ತದೆ. ಬಸ್ಸು ತನ್ನ ಸಾಮರ್ಥ್ಯದ ಶೇ. 100 ರಷ್ಟು ಪ್ರಯಾಣಿಕರಿಂದ ತುಂಬಿರುತ್ತದೆ.

ಉಳಿದ ಮಾಹಿತಿಗಳು ಈ ಕೆಳಗಿನಂತಿವೆ :

| | | |
|---|---|---|
| ಬಸ್ಸಿನ ಬೆಲೆ | ... | ರೂ. 6,00,000 |
| ಚಾಲಕನ ಸಂಬಳ ಪ್ರತಿ ತಿಂಗಳಿಗೆ | ... | ರೂ. 2,800 |
| ನಿರ್ವಾಹಕನ ಸಂಬಳ ಪ್ರತಿ ತಿಂಗಳಿಗೆ | ... | ರೂ. 2,200 |
| ಭಾಗಶಃ ಕೆಲಸ ಮಾಡುವ ಲೆಕ್ಕಿಗನ ಸಂಬಳ ಪ್ರತಿ ತಿಂಗಳಿಗೆ | ... | ರೂ. 200 |
| ಬಸ್ಸಿನ ಮೇಲೆ ಇರುವ ವಿಮೆ ಪ್ರತಿ ವರ್ಷಕ್ಕೆ | ... | ರೂ. 4,800 |
| ಡೀಝಲ್ ಒಂದು ಲೀಟರಿಗೆ 4 ಕಿ.ಮೀ. ಬೇಕಾಗುತ್ತದೆ | ... | ಪ್ರತಿ ಲೀಟರ್ ರೂ. 6 ರಂತೆ |
| ರಸ್ತೆ ಕರ ಪ್ರತಿ ವರ್ಷಕ್ಕೆ | ... | ರೂ. 1,500 |
| ಎಣ್ಣೆ ಪ್ರತಿ 100 ಕಿ.ಮೀ.ಗಳಿಗೆ ರೂ. 10 ರಂತೆ | | |
| ಪರವಾನಿಗೆ ಕರ ಪ್ರತಿ ತಿಂಗಳಿಗೆ | ... | ರೂ. 315 |
| ರಿಪೇರಿ ಮತ್ತು ದೇಖರೀಖಿ ಪ್ರತಿ ತಿಂಗಳಿಗೆ | ... | ರೂ. 1,000 |
| ಬಸ್ಸಿನ ಸವಕಳಿ ಪ್ರತಿ ವರ್ಷಕ್ಕೆ | ... | ಶೇ. 20 ರಷ್ಟು |
| ಬಸ್ಸಿನ ಸಾಮರ್ಥ್ಯ | ... | 50 ಜನರು |

ಒಟ್ಟು ಹಣ ತೆಗೆದುಕೊಂಡದ್ದರ ಮೇಲೆ ಶೇ. 20 ರಷ್ಟು ಪ್ರಯಾಣಿಕರ ತೆರಿಗೆ ಕೊಡಬೇಕಾಗುತ್ತದೆ. ಒಟ್ಟು ಖರ್ಚಿನ ಮೇಲೆ ಶೇಕಡಾ 30 ರಷ್ಟು ಲಾಭ ಬರಬೇಕಿದ್ದರೆ ಒಂದು ಪ್ರಯಾಣಿಕ ಮೇಲೆ ಮೇಲ್ಕಾಣಿಸಿದ ಸ್ಥಳಗಳಿಗೆ ಎಷ್ಟು ದರವನ್ನು ಆಕರಿಸಬೇಕು ಎನ್ನುವುದನ್ನು ಕಂಡುಹಿಡಿಯಿರಿ.

11. 'ಟಾಲ್ಕ' ಮತ್ತು 'ಕಾಂಪ್ಯಾಕ್ಟ್' ಎಂಬ ಎರಡು ನಮೂನೆಯ ಮುಖಪೌಡರನ್ನು ಮಾಡರ್ನ್ ಲಿಮಿಟೆಡ್ ತಯಾರಿಸುತ್ತದೆ. ಮಾರ್ಚ್ 31, 2014ಕ್ಕೆ ಕೊನೆಗೊಳ್ಳುವ ವರ್ಷದಲ್ಲಿ ತಯಾರಿಕೆಯ ವೆಚ್ಚಗಳು ಈ ಕೆಳಗಿನಂತಿವೆ :

| | | ರೂ. |
|---|---|---|
| ಪ್ರತ್ಯಕ್ಷ ಸರಕುಗಳು | ... | 3,20,000 |
| ನೇರ ಕೂಲಿ | ... | 4,40,000 |
| ಉತ್ಪಾದನಾ ಪರೋಕ್ಷ ವೆಚ್ಚ | ... | 1,20,000 |
| ಒಟ್ಟು | ... | 8,80,000 |

ಇದನ್ನು ಖಚಿತಪಡಿಸಿಕೊಳ್ಳಲಾಗಿದೆ :

(a) ಟಾಲ್ಕ ನಮೂನೆಯ ಮುಖಪೌಡರನಲ್ಲಿರುವ ಪ್ರತ್ಯಕ್ಷ ಸರಕುಗಳ ವೆಚ್ಚವು ಕಾಂಪ್ಯಾಕ್ಟ್ ನಮೂನೆಯ ಮುಖಪೌಡರಿಗಿಂತ ಎರಡು ಪಟ್ಟಾಗಿದೆ.

(b) ಕಾಂಪ್ಯಾಕ್ಟ್ ನಮೂನೆಯ ಮುಖಪೌಡರದಲ್ಲಿರುವ ಪ್ರತ್ಯಕ್ಷ ಕೂಲಿ ವೆಚ್ಚವು ಟಾಲ್ಕನಮೂನೆಯ ಪೌಡರದಲ್ಲಿರುವ ಪ್ರತ್ಯಕ್ಷ ಕೂಲಿವೆಚ್ಚದ ಶೇ. 60 ರಷ್ಟಿದೆ.

(c) ಎರಡೂ ನಮೂನೆಯ ಮುಖಪೌಡರಗಳಿಗೆ ಉತ್ಪಾದನಾ ಪರೋಕ್ಷ ವೆಚ್ಚವು ಪ್ರತಿಯೊಂದಕ್ಕೆ 80 ಪೈಸೆ ಆಗಿದೆ.

(d) ಎರಡೂ ನಮೂನೆಯ ಮುಖಪೌಡರಗಳಿಗೆ ಆಡಳಿತ ವೆಚ್ಚವು ಪ್ರತ್ಯಕ್ಷ ಕೂಲಿವೆಚ್ಚದ ಶೇಕಡಾ 150 ರಷ್ಟಿದೆ.

(e) ಎರಡು ನಮೂನೆಯ ಪೌಡರಗಳಿಗೆ ಮಾರಾಟ ವೆಚ್ಚವು ಪ್ರತಿಯೊಂದಕ್ಕೆ 50 ಪೈಸೆ ಆಗಿರುತ್ತದೆ.

(f) ವರ್ಷದಲ್ಲಿ ಉತ್ಪಾದನೆಯು :

ಟಾಲ್ಕ ನಮೂನೆ – 50,000 ಡಬ್ಬಿಗಳು ಅವುಗಳಲ್ಲಿ 45,000 ಮಾರಾಟವಾಗಿವೆ.

ಕಾಂಪ್ಯಾಕ್ಟ್ ನಮೂನೆ – 1,00,000 ಡಬ್ಬಿಗಳು ಅವುಗಳಲ್ಲಿ 90,000 ಮಾರಾಟವಾಗಿವೆ.

(g) ಟಾಲ್ಕ ನಮೂನೆಯ ಪೌಡರಗಳಿಗೆ ಮಾರಾಟ ಬೆಲೆಯು ಪ್ರತಿ ಡಬ್ಬಿಗೆ ರೂ. 20 ಮತ್ತು ಕಾಂಪ್ಯಾಕ್ಟ್ ನಮೂನೆಯ ಪೌಡರಗಳಿಗೆ ಮಾರಾಟ ಬೆಲೆಯು ಪ್ರತಿಡಬ್ಬಿಗೆ ರೂ. 14 ಇರುತ್ತದೆ.

ಪ್ರತಿ ನಮೂನೆಯ ಒಂದು ಡಬ್ಬಿಯ ಪೌಡರಿಗೆ ಒಟ್ಟು ವೆಚ್ಚ ಮತ್ತು ಲಾಭಗಳನ್ನು ತೋರಿಸುವ ಪಟ್ಟಿಯನ್ನು ತಯಾರಿಸಿರಿ.

12. ಈ ಕೆಳಗೆ ಕೊಟ್ಟ ಮಾಹಿತಿಯಿಂದ ಸಮನ್ವಯ ಪಟ್ಟಿಯನ್ನು ತಯಾರಿಸಿರಿ :

| | | ರೂ. |
|---|---|---|
| ವೆಚ್ಚಶಾಸ್ತ್ರದ ಪ್ರಕಾರ ನಿವ್ವಳ ನಷ್ಟ | ... | 1,72,400 |
| ವೆಚ್ಚಶಾಸ್ತ್ರದಲ್ಲಿ ಉತ್ಪಾದನಾ ಪರೋಕ್ಷ ವೆಚ್ಚವನ್ನು ಕಡಿಮೆ ಆಕರಿಸಿದ್ದು | ... | 3,120 |
| ವೆಚ್ಚಶಾಸ್ತ್ರದಲ್ಲಿ ಆಡಳಿತಾತ್ಮಕ ಪರೋಕ್ಷ ವೆಚ್ಚವನ್ನು ಹೆಚ್ಚಿಗೆ ಆಕರಿಸಿದ್ದು | ... | 1,700 |
| ಲೆಕ್ಕಶಾಸ್ತ್ರದಲ್ಲಿ ಸವಕಳಿ ಆಕರಿಸಿದ್ದು | ... | 11,200 |

| | | ರೂ. |
|---|---|---|
| ವೆಚ್ಚಶಾಸ್ತ್ರದಲ್ಲಿ ಸವಕಳಿ ಆಕರಿಸಿದ್ದು | ... | 12,500 |
| ಬಡ್ಡಿ ಸ್ವೀಕರಿಸಿದ್ದು ವೆಚ್ಚಶಾಸ್ತ್ರದಲ್ಲಿ ಕೂಡಿರುವುದಿಲ್ಲ | ... | 8,000 |
| ಲೆಕ್ಕಶಾಸ್ತ್ರದಲ್ಲಿ ನಮೂದಿಸಿದ ನಿಷ್ಪ್ರಯೋಜಕ ವಸ್ತುಗಳ ಹಾನಿ | ... | 5,700 |
| ಲೆಕ್ಕಶಾಸ್ತ್ರದಲ್ಲಿ ಆದಾಯ ತೆರಿಗೆಗೆ ಒದಗಿಸಿದ್ದು | ... | 40,300 |
| ಲೆಕ್ಕಶಾಸ್ತ್ರದಲ್ಲಿ ಬಡ್ಡಿ ಜಮೆ ಮಾಡಿದ್ದು | ... | 750 |
| ಲೆಕ್ಕಶಾಸ್ತ್ರದಲ್ಲಿ ಜಮಾ ಕೊಡಲಾದ ಸರಕು ಹೊಂದಾಣಿಕೆ | ... | 475 |
| ವೆಚ್ಚಶಾಸ್ತ್ರದಲ್ಲಿ ಪ್ರಾರಂಭಿಕ ಸರಕುಗಳ ಮೌಲ್ಯ | ... | 52,600 |
| ಲೆಕ್ಕಶಾಸ್ತ್ರದಲ್ಲಿ ಪ್ರಾರಂಭಿಕ ಸರಕುಗಳ ಮೌಲ್ಯ | ... | 54,000 |
| ವೆಚ್ಚಶಾಸ್ತ್ರದಲ್ಲಿ ಅಖೈರು ಸರಕುಗಳ ಮೌಲ್ಯ | ... | 52,000 |
| ಲೆಕ್ಕಶಾಸ್ತ್ರದಲ್ಲಿ ಅಖೈರು ಸರಕುಗಳ ಮೌಲ್ಯ | ... | 49,600 |
| ವೆಚ್ಚಶಾಸ್ತ್ರದಲ್ಲಿ ಮಾತ್ರ ಬಡ್ಡಿ ಆಕರಿಸಿದ್ದು | ... | 6,000 |
| ಲೆಕ್ಕಶಾಸ್ತ್ರದಲ್ಲಿ ಸಂಶಯಾಸ್ಪದ ಸಾಲಗಳಿಗೆ ಒದಗಿಸಿದ್ದು | ... | 150 |
| ಲೆಕ್ಕಶಾಸ್ತ್ರದಲ್ಲಿ ಪೂರ್ವಭಾವಿ ವೆಚ್ಚಗಳನ್ನು ತೆಗೆದುಹಾಕಿದ್ದು | ... | 800 |

13. ಆದರ್ಶ ಕಂಪನಿ ಲಿಮಿಟೆಡ್ ಇವರು ಮೂರು ಬೇರೆ ಬೇರೆ ವಸ್ತುಗಳನ್ನು ಉತ್ಪಾದಿಸುತ್ತದೆ ಮತ್ತು ಅವುಗಳ ಬಗ್ಗೆ ಈ ಕೆಳಗಿನ ಮಾಹಿತಿ ಕೊಡಲಾಗಿದೆ :

| ವಿವರಗಳು | | ವಸ್ತುಗಳು | | |
|---|---|---|---|---|
| | | ಎ | ಬಿ | ಸಿ |
| ವಿಕ್ರಿ ಮಿಶ್ರಣ | ... | 35% | 35% | 30% |
| ಮಾರಾಟ ಬೆಲೆ ಪ್ರತಿ ಯೂನಿಟ್ಟಿಗೆ | ... | ರೂ. 30 | ರೂ. 40 | ರೂ. 20 |
| ಚರ ವೆಚ್ಚ ಪ್ರತಿ ಯೂನಿಟ್ಟಿಗೆ | ... | ರೂ. 15 | ರೂ. 20 | ರೂ. 12 |
| ಒಟ್ಟು ಸ್ಥಿರ ವೆಚ್ಚ | ... | ರೂ. 1,80,000 | | |
| ಒಟ್ಟು ವಿಕ್ರಿ | ... | ರೂ. 6,00,000 | | |

ಕಂಪನಿಯು 'ಸಿ' ವಸ್ತುವಿನ ಉತ್ಪಾದನೆಯನ್ನು ನಿಲ್ಲಿಸಿ 'ಬಿ' ವಸ್ತುವನ್ನು ಉತ್ಪಾದಿಸುವ ಬಗ್ಗೆ ಯೋಚಿಸುತ್ತಿದೆ. ಅಂತಹ ಸಂದರ್ಭದಲ್ಲಿ ಈ ಕೆಳಗಿನ ಫಲಿತಾಂಶಗಳನ್ನು ಅಂದಾಜಿಸಲಾಗಿದೆ :

| ವಿವರಗಳು | | ವಸ್ತುಗಳು | | |
|---|---|---|---|---|
| | | ಎ | ಬಿ | ಪಿ |
| ವಿಕ್ರಿ ಮಿಶ್ರಣ | ... | 50% | 25% | 25% |
| ಮಾರಾಟ ಬೆಲೆ ಪ್ರತಿ ಯುನಿಟ್ಟಿಗೆ | ... | ರೂ. 30 | ರೂ. 40 | ರೂ. 30 |
| ಚರವೆಚ್ಚ ಪ್ರತಿ ಯುನಿಟ್ಟಿಗೆ | ... | ರೂ. 15 | ರೂ. 20 | ರೂ. 15 |
| ಒಟ್ಟು ಸ್ಥಿರ ವೆಚ್ಚ | ... | ರೂ. 1,80,000 | | |
| ಒಟ್ಟು ವಿಕ್ರಿ | ... | ರೂ. 6,40,000 | | |

ಈ ಸಧ್ಯ ಇರುವ ಲಾಭದ ಸ್ಥಿತಿ ಮತ್ತು 'ಸಿ' ವಸ್ತುವಿನ ಉತ್ಪಾದನೆಯನ್ನು ಸ್ಥಗಿತಗೊಳಿಸಿ 'ಪಿ' ವಸ್ತುವನ್ನು ಉತ್ಪಾದಿಸಿದರೆ ಆಗಬಹುದಾದ ಲಾಭದ ಸ್ಥಿತಿಯನ್ನು ಕಂಡುಹಿಡಿಯಿರಿ. 'ಸಿ' ವಸ್ತುವಿನ ಉತ್ಪಾದನೆಯನ್ನು ಸ್ಥಗಿತಗೊಳಿಸಿ 'ಪಿ' ವಸ್ತುವನ್ನು ಉತ್ಪಾದಿಸುವದರ ಬಗೆಗೆ ಕಾರಣ ಸಹಿತ ನಿಮ್ಮ ಸಲಹೆ–ಸೂಚನೆಗಳನ್ನು ಕೊಡಿರಿ.

(3 × 15 = 45 marks)